ಗದ್ದೆಗಳನ್ನು ಸಾಧುಶೆಟ್ಟಿಯ ಅಜ್ಜನ ಕಾಲದಿಂದಲೂ ಚಾಲ ಗೇಣಿಗೆ ಗೇಯುತ್ತಿದ್ದವ ಈ ತಿಂಮಪೂಜಾರಿಯ ಅಪ್ಪ ಲೋಕುಪೂಜಾರಿ. ತನ್ನ ಅಜ್ಜ ಅಪ್ಪ ಗೇಯುತ್ತಿದ್ದ ಗದ್ದೆಗಳೆಂಬ ಮಮಕಾರದಲ್ಲಿ ತಿಂಮಪೂಜಾರಿ, ತನ್ನ ಕೈಲಾಗದಿದ್ದರೂ, ಇಂದಿಗೂ ತನ್ನ ಹೆಂಡತಿ ಮಕ್ಕಳ ಜತೆಗೂಡಿ ಆ ಗದ್ದೆಗಳನ್ನು ಸಾಗುವಳಿ ಮಾಡುತ್ತಿದ್ದಾನೆ. ಇನ್ನೇನು... ತನ್ನ ಕೈಲಾಗುವುದಿಲ್ಲ... ಹೆಣ್ಣು ಮಕ್ಕಳಿಗೂ ಮದ್ವೆಯಾಯಿತು; ಸಾಗುವಳಿ ಸಮಯದಲ್ಲಿ ಅವರು ಗಂಡನ ಮನೆಯಿಂದ ಬಂದು ದುಡಿಯುವುದು... ಇನ್ನೂ ಎಷ್ಟು ದಿನದ ವರೆಗೆಎಂದು ಯೋಚಿಸುತ್ತ ಆತ ಆ ಚಾಲಗೇಣಿ ಗದ್ದೆಗಳನ್ನು ಬಿಟ್ಟು ಬಿಡಬೇಕೆಂದರೂ, ಆ ಗದ್ದೆಗಳ ಮೇಲೆ ಆತನಿಗಿರುವ ಮಮಕಾರ ಆತನನ್ನು ಬಿಟ್ಟು ಹೋಗದಂತೆ ತಡೆಯುತ್ತಿದೆ. ಆತನ ಹೆಂಡತಿ ಕಮಲಳಿಗೂ ಅಷ್ಟೆ.

ಇದೀಗ... ಸಾಧು ಶೆಟ್ಟಿಯ ಜೊತೆಗೆ ಕೆರೆಕೋಡಿಯ ಪಟೇಲರು ಮತ್ತು ಬೈಕಂಡಿಗುತ್ತಿನ ಗುತ್ತಿನ ಒಡೆಯರು ಬರುತ್ತಿರುವುದನ್ನು ದೂರದಲ್ಲೇ ನೋಡಿದ ತಿಂಮಪೂಜಾರಿ, 'ಈ ಗದ್ದೆಗಳಲ್ಲಿ ಇವತ್ತು ಗುತ್ತಿನ ಈ ಸೆಟ್ರುಗಳಿಗೇನು ಕೆಲಸವಪ್ಪ...' ಎಂದು ಒಂದು ರೀತಿಯ ಅಚ್ಚರಿಯಲ್ಲೇ ಅವರನ್ನು ದಿಟ್ಟಿಸಿದ್ದ. ಅವರು ಹತ್ತಿರ ಬರುತ್ತಿದ್ದಂತೆ ನಡುಬಗ್ಗಿಸಿ ಕೈ ಜೋಡಿಸಿ, ನಮಸ್ಕರಿಸಿದ್ದರು.

ಬಂದವರೊಂದಿಗೆ ಸಾಧು ಶೆಟ್ಟಿ, ಕಟ್ಟಹುಣಿ ಏರುವ ಮುನ್ನವೇ... 'ಆ ಮರ ನೋಡಿ ಮಾವ... ಆ ಎರಡ್ರಲ್ಲಿ ನಿಮ್ಗೆ ಯಾವುದು ಬೇಕೋ ಹೇಳಿ; ಎರಡೂ ಒಂದೇ ರೀತಿಯಿವೆ; ಒಂದೇ ರೀತಿ ಬಲಿತಿವೆ' ಎಂದು ಹೇಳುತ್ತಿದ್ದರೆ, ಇತ್ತ ಬಂದವರು ಆ ಮರಗಳ ಚಂದವನ್ನು ದಿಟ್ಟಿಸುತ್ತಿದ್ದಾರೆ. ತಿಂಮ ಎಲ್ಲರ ಮಾತನ್ನು ತದೇಕಚಿತ್ತನಾಗಿ ಕೇಳಿಸಿಕೊಳ್ಳುತ್ತಿದ್ದ. ತನ್ನೆದುರು ಅವಳಿ ಮಕ್ಕಳಂತೆ ನಿಂತಿರುವ ಆ ಮರಗಳ ಕುರಿತಂತೆ ದಣಿಯು ಹೇಳುತ್ತಿದ್ದ, ಮಾತನ್ನು ನಿಧಾನವಾಗಿ ಕೇಳಿಸಿಕೊಂಡು, ಅದನ್ನು ಅರಗಿಸಿಕೊಳ್ಳುತ್ತಿದ್ದ ತಿಂಮಪೂಜಾರಿಯ ಎದೆಯು ಭಯದಿಂದ ಹಾಗು ದುಃಖದಿಂದ ವೇಗವಾಗಿ ಬಡಿದುಕೊಳ್ಳತೊಡಗಿತು! ತಿಂಮಪೂಜಾರಿ ಆಗಲೇ ಯೋಚನೆಗೆ ಬಿದ್ದುಬಿಟ್ಟಿದ್ದ. 'ಆ ಮರಗಳಿರುವ ಆ ಕಟ್ಟಹುಣಿ, ತನ್ನ ಒಂದು ಮುಡಿ ವಿಸ್ತಾರವುಳ್ಳ ಚಾಲಗೇಣಿ ಗದ್ದೆಗಳ ಮೇಲೆ ನಿಂತಿದೆ. ಆ ಗೇಣಿಗದ್ದೆಗಳ ಮೇಲೆ ತನಗೆ ಹಕ್ಕು ಇದೆಯೋ ಇಲ್ಲವೋ ಗೊತ್ತಿಲ್ಲ. ಒಟ್ಟಾರೆ ವರ್ಷ ವರ್ಷವೂ ಮಳೆಬಿಸಿಲಿಗೆ ಅಡ್ಡಬಿದ್ದು, ಏತದ ನೀರೆಳೆದು, ಬೆಳೆ ಬೆಳೆಸಿ ಇಂತಿಷ್ಟು ಅಕ್ಕಿ ಗೇಣಿ ಅಂವ ಕೊಡ್ತಾ ಇದ್ದೇನೆ. 'ಈ ಮರಗಳು ನನ್ನ ಗದ್ದೆಗಳ ಮೇಲಿರುವ ಕಟ್ಟಹುಣಿಯಲ್ಲಿದೆ ಅದು ತನ್ನ ಗದ್ದೆಗಳ ಪರಿಧಿಗೆ ಸೇರಿದ್ದೆಂದು' ತನ್ನೊಳಗೇ ಭಾವಿಸಿಕೊಂಡಿದ್ದ ತನ್ನಜ್ಜ ಸೋಂಪ ಪೂಜಾರಿ, ಯಾವತ್ತೋ ಒಂದು ವರ್ಷ ಮುಲ್ಕಿಯ ಅರಸು ಕಂಬಳಕ್ಕೆ ಹೋಗಿದ್ದವ ಬರುವಾಗ ತಂದಿದ್ದ ಎರಡು ತೇಗದ ಗಿಡಗಳೀಗ ಮರವಾಗಿ ನಿಂತಿವೆ. ಅರಸು ಕಂಬಳದ ದಿನ ಆ ಎರಡು ಸಸಿಗಳನ್ನು ನೆಡುವಾಗ ನನ್ನನ್ನು ಅಜ್ಜ ಪಕ್ಕದಲ್ಲಿ ನಿಲ್ಲಿಸಿದ್ದ... ಆಗ ಆ ಗಿಡಗಳು ಆಗ ನನ್ನ ಸೊಂಟಕ್ಕೆ ಬರ್ತಿದ್ವು ಅಷ್ಟೆ. ಅಷ್ಟು ಸಣ್ಣವನು ನಾನು...'

ಆತನೆದುರಿಗಿದ್ದ ಆ ಅವಳಿ ಮರಗಳು ಸಸಿಯಾಗಿದ್ದಾಗ, ಅಂವು ಬೆಳೆಯುತ್ತಿದ್ದ ಕಾಲದ ನೆನಪುಗಳು... ತಿಂಮಪೂಜಾರಿಯ ಅಂತರಂಗದೊಳಗೆ ಮಾಲೆ ಮಾಲೆಯಾಗಿ ಏರಿ ಬರುತಿದ್ದಂತೆ, ಇತ್ತ ಕಟ್ಟಹುಣಿಯಲ್ಲಿ ನಿಂತಿದ್ದ ಇಬ್ಬರು ಶೆಟ್ರುಗಳು ಯಾವ ಮರವನ್ನು ಆಯ್ಕೆ ಮಾಡಬೇಕೆಂಬ ದ್ವಂದ್ವದಲ್ಲಿದ್ದಾರೆ. ಅವರೆದುರು ಆ ಎರಡೂ ಮರಗಳು ಎದೆ ಸೆಟೆಸಿ ನಿಂತಿವೆ... 'ನಾನೋ...ನೀನೋ...' ಎನ್ನುವಂತೆ.

'ನಾವು ಈಗ ಮರ ನೋಡಿ ಹೋಗುವ... ಆಮೇಲೆ ನಮ್ಮ ಶ್ರೀಧರಾಚಾರಿಯನ್ನು ಇವೆರಡರಲ್ಲಿ ಒಂದನ್ನು ಖಾಯಸ್ಸು ಮಾಡಲು ಕಳಿಸುವ' ಎಂದು ದೇವಪ್ಪ ಶೆಟ್ರು ಭಾವನಿಗೆ ಹೇಳಿದಾಗ ಮಾರಪ್ಪಾಳ್ವರು ಒಪ್ಪಿದ್ದರು. ಅವರಿಬ್ಬರೂ ಸಾಧುಶೆಟ್ಟಿಯಲ್ಲಿ, ಮತ್ತೇನೋ... ಆ ಮರದ ಬಗ್ಗೆ ಪ್ರಶ್ನಿಸುತ್ತಿದ್ದಂತೆ, ಇತ್ತ ತಿಂಮ ಪೂಜಾರಿಯ ಎದೆಯೊಳಗೆ ಏನೋ ತಳಮಳವುಂಟಂತಾಗಿ, ತಟ್ಟನೆ ಆತ